# ಕರ್ನಾಟಕ ಅರಣ್ಯ ಇಲಾಖೆ

## ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ

# ವಿಶ್ವ ವನ್ಯಜೀವಿ ದಿನಾಚರಣೆ

Big Cats: predators under threat

3ನೇ ಮಾರ್ಚ್ 2018



BNP Bannerghatta National Park

WCG Wildlife Conservation Group

# ವಿಶ್ವ ವನ್ಯಜೀವಿ ದಿನಾಚರಣೆ -2018

**ಪರಿಚಯ**

ಡಿಸೆಂಬರ್ 20, 2013 ರಲ್ಲಿ the United Nations General Assembly (UNGA) ಅಂತರಾಷ್ಟ್ರೀಯ ಒಕ್ಕೂಟ ಒಂದು ಮಹತ್ತರವಾದ ನಿರ್ಧಾರವನ್ನು ತೆಗೆದುಕೊಂಡಿತು. ಭೂಮಿಯ ಮೇಲೆ ಅಳಿವಿನಂಚಿನಲ್ಲಿರುವ ಸಸ್ಯ ಹಾಗು ಪ್ರಾಣಿ ವರ್ಗಗಳ ಸಂರಕ್ಷಣೆಗಾಗಿ ಅವುಗಳ ಬಗ್ಗೆ ಅರಿವು ಮೂಡಿಸಲು ಪ್ರತಿ ವರ್ಷದ ಮಾರ್ಚ್ 3 ನೇ ದಿನಾಂಕವನ್ನು ಅಂತರರಾಷ್ಟ್ರೀಯ ವನ್ಯಜೀವಿಗಳ ದಿನವೆಂದು ಘೋಷಿಸಲಾಯಿತು. ಪ್ರತಿ ವರ್ಷ ಈ ದಿನವನ್ನು ವಿಶ್ವದಾದ್ಯಂತ ವಿಶ್ವ ವನ್ಯಜೀವಿ ದಿನಾಚರಣೆ ಎಂದು ಆಚರಿಸಲಾಗುತ್ತಿದೆ. ಅದರಂತೆ ಈ ವರ್ಷವೂ ಅಳಿವಿನಂಚಿನಲ್ಲಿರುವ ದೊಡ್ಡ ಬೆಕ್ಕುಗಳು ಎಂಬ ಅಣೆಪಟ್ಟಿಯೊಂದಿಗೆ ಆಚರಿಸಲಾಗುತ್ತಿದೆ.

ಅಂತರರಾಷ್ಟ್ರೀಯ ವನ್ಯಜೀವಿ ದಿನವನ್ನು ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ, ಕರ್ನಾಟಕ ಸರ್ಕಾರ ಇವರು WILDLIFE CONSERVATION GROUP ರವರ ಸಹಯೋಗದೊಂದಿಗೆ ಆಚರಿಸಲಾಯಿತು.

**ಕಾರ್ಯಕ್ರಮದ ವಿವರಣೆ**

ಈ ಕಾರ್ಯಕ್ರಮದಲ್ಲಿ ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ ಪಕ್ಕದಲ್ಲೇ ಬರುವಂತಹ ತಟ್ಟೆಕೆರೆ ಮತ್ತು ಅರೆಕಡಕಲು ಸರ್ಕಾರಿ ಹಿರಿಯ ಪ್ರಾಥಮಿಕ ಪಾಠ ಶಾಲೆಯ ಮಕ್ಕಳು ಭಾಗವಹಿಸಿದ್ದರು. ಈ ಎರಡೂ ಶಾಲೆಗಳು ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನದ ಪಕ್ಕದಲ್ಲೇ ಇರುವುದರಿಂದ, ಇಲ್ಲಿನ ಮಕ್ಕಳಿಗೆ ಕಾಡಿನ ಆಗು-ಹೋಗುಗಳ ಬಗ್ಗೆ ಅರಿವು ಮೂಡಿಸುವ ಉದ್ದೇಶದಿಂದ ಅವರನ್ನೇ ಆಯ್ಕೆ ಮಾಡಲಾಯಿತು. ಮಕ್ಕಳಿಗೆ ಮುಂಜಾನೆಯ ಉಪಹಾರ ಕೊಟ್ಟ ನಂತರ ವೈಲ್ಡ್ ಲೈಫ್ ಕನ್ಸರ್ವೇಷನ್ ಗ್ರೂಪಿನ ಅಡವಿ ಫೀಲ್ಡ್ ಸ್ಟೇಷನ್, ಶಿವನಹಳ್ಳಿಯಲ್ಲಿ ಕಾರ್ಯಕ್ರಮವನ್ನು ಚಾಲನೆಗೊಳಿಸಲಾಯಿತು.

ಮೊದಲನೆಯದಾಗಿ ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನದ ಫಾರೆಸ್ಟರ್ ಆದ **ಶ್ರೀ ಮಹೇಶ್** ರವರು ಹಾಗು ವಲಯ ಅರಣ್ಯ ಸಂರಕ್ಷಣಾಧಿಕಾರಿಯಾದ **ಶ್ರೀ ಗಣೇಶ್ ವಿ ಥಡಗಣಿ** ರವರು

ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನದ ಇತಿಹಾಸ ಜೀವವೈವಿಧ್ಯ, ಅರಣ್ಯ ಸಂಪತ್ತಿನ ಉಳಿವಿಗಾಗಿ ನಾಗರೀಕರ ಕರ್ತವ್ಯಗಳ ಬಗ್ಗೆ ವಿವರಿಸಿದರು.

ವೈಲ್ಡ್ ಲೈಫ್ ಕನ್ಸರ್ವೇಷನ್ ಗ್ರೂಪಿನ ಸದಸ್ಯರಾದ ಅಶ್ವಥ ಕೆ ಎನ್ ಮತ್ತು ಜೈಕುಮಾರ್ ರವರು ದೃಶ್ಯ ಮಾಧ್ಯಮದ ಮೂಲಕ ಮಕ್ಕಳಿಗೆ ದೊಡ್ಡಬೆಕ್ಕುಗಳಾದ ಹುಲಿ, ಸಿಂಹ, ಹಿಮಚಿರತೆ, ಕಪ್ಪುಚಿರತೆ, ಚೀತಾಗಳ ಬಗ್ಗೆ ಮಾಹಿತಿ ನೀಡಿದರು. ಚೀತಾ ಏಕೆ ಭಾರತದಿಂದ ಅವನತಿ ಹೊಂದಿತು? ಎಂದು ವಿವರಿಸಿದರು. ಮಕ್ಕಳಿಗೆ ಜೀವಜಾಲದ ಬಗ್ಗೆ ಹಾಗು ಪರಿಸರದಲ್ಲಿ ಪ್ರಾಣಿಗಳ ನಡುವಿನ ಪರಸ್ಪರ ಅವಲಂಬನೆ ಬಗ್ಗೆ ಚಟುವಟಿಕೆಗಳು ಮತ್ತು ಭಾರತದಲ್ಲಿನ ದೊಡ್ಡ ಬೆಕ್ಕುಗಳ ಹಿಂದಿನ ಹಾಗು ಈಗಿನ ಸ್ಥಿತಿಗತಿ ಎಂಬ ವಿಷಯದ ಬಗ್ಗೆ ಸವಿವರವಾಗಿ ಮಕ್ಕಳಿಗೆ ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನದ ವಲಯ ಅರಣ್ಯ ಸಂರಕ್ಷಣಾಧಿಕಾರಿಯಾದ ಶ್ರೀ ಗಣೇಶ್ ವಿ ಥಡಗಣಿ ರವರು ತಿಳಿಸಿಕೊಟ್ಟರು. ಜೊತೆಯಲ್ಲಿ ಅರಣ್ಯದ ಬಗ್ಗೆ ಮಕ್ಕಳಲ್ಲಿ ಇದ್ದ ಕೆಲವು ಪ್ರಶ್ನೆಗಳಿಗೆ ಉತ್ತರಿಸಿದರು.

ಮಧ್ಯಾನ್ಹದ ಊಟದ ನಂತರ ಐದು ಮತ್ತು ಆರನೇ ತರಗತಿಯ ಮಕ್ಕಳಿಗೆ **“ಕಳ್ಳ ಬೇಟೆಯಿಂದ ಹುಲಿಗಾಗುತ್ತಿರುವ ತೊಂದರೆ”** ಎಂಬ ವಿಷಯದ ಬಗ್ಗೆ ಚಿತ್ರಕಲೆ ಸ್ಪರ್ಧೆ ಏರ್ಪಡಿಸಲಾಯಿತು .ಏಳು ಮತ್ತು ಎಂಟನೇ ತರಗತಿಯ ಮಕ್ಕಳನ್ನು ಚಿಕ್ಕ-ಚಿಕ್ಕ ತಂಡಗಳಾಗಿ ಮಾಡಿ ಒಂದೊಂದು ತಂಡಗಳಿಗೆ ಕಾಡಿನ ಆವಾಸಗಳನ್ನು ಕುರಿತ ನಾಟಕದ ವಿಷಯಗಳನ್ನು ಕೊಡಲಾಯಿತು.

ಕಾರ್ಯಾಕ್ರಮದ ಅಂತಿಮದಲ್ಲಿ ರಾಮಕೃಷ್ಣ ಮಿಷನ್ ಶಿವನಹಳ್ಳಿಯ ಸ್ವಾಮಿಜೀಗಳಾದ **ಸ್ವಾಮಿ ಸೌಖ್ಯಾನಂದಜೀ ಮಹಾರಾಜ್** ರವರು ಮಕ್ಕಳಿಗೆ ನಮ್ಮ ಸುತ್ತಲಿನ ಪರಿಸರದ ಕುರಿತ ಮಾಹಿತಿಗಳ ಜೊತೆಗೆ ಪರಿಸರದಲ್ಲಿ ಸಹಬಾಳ್ವೆಯ ಬಗ್ಗೆ ಹಿತವಚನವನ್ನು ನೀಡಿದರು. ಎಲ್ಲಾ ಮಕ್ಕಳಿಗೆ ವಿಶ್ವವನ್ಯಜೀವಿ ದಿನದಲ್ಲಿ ಭಾಗವಹಿಸಿದಕ್ಕೆ ಪ್ರಮಾಣಪತ್ರವನ್ನು ನೀಡಲಾಯಿತು. ದೊಡ್ಡಬೆಕ್ಕುಗಳಂತಹ ಮಾಂಸಹಾರಿ ಪ್ರಾಣಿಗಳು ಬದುಕ ಬೇಕಾದರೆ ಸಸ್ಯಹಾರಿ ಪ್ರಾಣಿಗಳ ಉಳಿವು ಅಗತ್ಯ. ಪ್ರಾಣಿಗಳ ಉಳಿವಿಗೆ ಕಾಡಿನ ಉಳಿವು ಅಗತ್ಯ ಎಂದು ಮನವರಿಕೆ ಮಾಡಿಸಿ ತಮ್ಮ ಸುತ್ತಮುತ್ತಲಿನ ಕಾಡು ಮತ್ತು ನೀರಿನ ಮೂಲಗಳನ್ನು ಉಳಿಸಿಕೊಳ್ಳುವುದರ ಮಹತ್ವವನ್ನು ತಿಳಿಸಲಾಯಿತು.

## ಕಿರುನಾಟಕದ ವಿಷಯ

1. ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನದ ಏಕೈಕ ಹುಲಿ ನಾನಾದರೆ?
2. ಕಾಡು ಮತ್ತು ಕಾಡ್ಗಿಚ್ಚು
3. ನಮ್ಮೂರ ಕೆರೆ.
4. ಆನೆ-ಮಾನವ ಸಂಘರ್ಷ
5. ಪ್ಲಾಸ್ಟಿಕ್ ಬಳಕೆಯಿಂದ ಕಾಡಿನ ಮೇಲೆ ಉಂಟಾಗುತ್ತಿರುವ ಪರಿಣಾಮ

ಈ ಮೇಲಿನ ವಿಷಯಗಳಿಗೆ ಸಂಬಂಧ ಪಟ್ಟ ಕಿರುನಾಟಕಗಳಿಗೆ ಮಕ್ಕಳು ತಾವೇ ಸ್ವತಃ ಕಥೆಯನ್ನು ಕಟ್ಟಿ, ಸಂಭಾಷಣೆ ನೆಯ್ದು, ಅಭಿನಯಿಸಿ ತೋರಿಸಿದರು. ಚಿತ್ರಕಲೆ ಮತ್ತು ನಾಟಕದಲ್ಲಿ ಗೆದ್ದವರಿಗೆ ಬಹುಮಾನ ಕೊಟ್ಟು ಪ್ರೋತ್ಸಾಹಿಸಲಾಯಿತು.

# ವಿಜೇತರು

## ಚಿತ್ರಕಲಾ ಸ್ಪರ್ಧೆ

ಚಿತ್ರಕಲಾ ಸ್ಪರ್ಧೆಯಲ್ಲಿ ಐದು ಮತ್ತು ಆರನೇ ತರಗತಿಗಳ ವಿಭಾಗದಲ್ಲಿ ಮಕ್ಕಳಿಗೆ **"ಕಳ್ಳ ಬೇಟೆಯಿಂದ ಹುಲಿಗಾಗುತ್ತಿರುವ ತೊಂದರೆ"** ಸ್ಪರ್ಧೆಯನ್ನು ಮಾಡಲಾಯಿತು ಅದರಲ್ಲಿ ಪ್ರಥಮ ಮತ್ತು ದ್ವಿತೀಯ ಬಹುಮಾನ ಪಡೆದ ವಿದ್ಯಾರ್ಥಿಗಳು.

| ಕ್ರ.ಸಂ | ಹೆಸರು | ತರಗತಿ | ಶಾಲೆ | *ಬಹುಮಾನ* |
|---|---|---|---|---|
| 1 | *ದಿವ್ಯಾ. ಆರ್.* | 6*ನೇ ತರಗತಿ* | *ತಟ್ಟೆಕೆರೆ* | ಪ್ರಥಮ |
| 2 | *ಶ್ರೀಕಾಂತ್ ಎಂ.* | 5*ನೇ ತರಗತಿ* | *ಅರೆಕಡಕಲು* | ದ್ವಿತೀಯ |

## ಕಿರುನಾಟಕ ಸ್ಪರ್ಧೆ

ಕಿರುನಾಟಕ ಸ್ಪರ್ಧೆಯ ಏಳು, ಎಂಟನೇ ತರಗತಿಗಳ ವಿಭಾಗದಲ್ಲಿ **"ನಮ್ಮೂರ ಕೆರೆ"** ಮತ್ತು **"ಕಾಡ್ಗಿಚ್ಚು"** ಎಂಬ ವಿಷಯಗಳ ಮೇಲೆ ಕ್ರಮವಾಗಿ ಪ್ರಥಮ ಮತ್ತು ದ್ವಿತೀಯ ಬಹುಮಾನ ಪಡೆದ ತಂಡಗಳು.

ಪ್ರಥಮ ಬಹುಮಾನ ಪಡೆದ ತಂಡ

| ಕ್ರ.ಸಂ | ಹೆಸರು | ತರಗತಿ | ಶಾಲೆ |
|---|---|---|---|
| 1 | ಪ್ರಜ್ವಲ್ ನಾಯಕ | *7 ನೇ ತರಗತಿ* | *ತಟ್ಟೆಕೆರೆ* |
| 2 | ದಿವ್ಯ ಬಾಯಿ ಎಸ್. | *7 ನೇ ತರಗತಿ* | *ತಟ್ಟೆಕೆರೆ* |
| 3 | ಉಲ್ಲಾಸ್ ಎನ್. | *8 ನೇ ತರಗತಿ* | *ತಟ್ಟೆಕೆರೆ* |
| 4 | ಪುಟ್ಟಮಾದಯ್ಯ | *7 ನೇ ತರಗತಿ* | *ತಟ್ಟೆಕೆರೆ* |
| 5 | ಸಾಗರ್ ಆರ್. | *7 ನೇ ತರಗತಿ* | *ಅರೆಕಡಕಲು* |

ದ್ವಿತೀಯ ಬಹುಮಾನ ಪಡೆದ ತಂಡ

| ಕ್ರ.ಸಂ | ಹೆಸರು | ತರಗತಿ | ಶಾಲೆ |
|---|---|---|---|
| 1 | ರಕ್ಷಿತ ಎಸ್. | *8 ನೇ ತರಗತಿ* | *ತಟ್ಟೆಕೆರೆ* |
| 2 | ಭೂಮಿಕ | *7 ನೇ ತರಗತಿ* | *ತಟ್ಟೆಕೆರೆ* |
| 3 | ಶಶಿಕಲಾ | *7 ನೇ ತರಗತಿ* | *ಅರೆಕಡಕಲು* |
| 4 | ಪ್ರೀತಮ್ | *7 ನೇ ತರಗತಿ* | *ಅರೆಕಡಕಲು* |
| 5 | ಪ್ರಮೋದ | *8 ನೇ ತರಗತಿ* | *ತಟ್ಟೆಕೆರೆ* |

## ಅಂಕಿ-ಅಂಶಗಳು

ಕಾರ್ಯಕ್ರಮದಲ್ಲಿ ಭಾಗವಹಿಸಿದ ಒಟ್ಟು ಮಕ್ಕಳು: **78**

ಭಾಗವಹಿಸಿದ ಒಟ್ಟು ಶಿಕ್ಷಕರು: **03**

**ಭಾಗವಹಿಸಿದ ಸ್ವಯಂ ಸೇವಕರು:**

ವೈಲ್ಡ್ ಲೈಫ್ ಡೇ ಕಾರ್ಯಕ್ರಮದ ಯಶಸ್ಸಿನ ಹಿಂದೆ ಸ್ವಯಂ ಸೇವಕರ ಪಾತ್ರ ಅತೀವ ಮುಖ್ಯವಾಗಿದ್ದು.

1. ಮಹದೇವ ಕೆ. ಸಿ.
2. ಅಶ್ವಥ ಕೆ. ಎನ್
3. ನಾಗೇಶ್ ಓ. ಎಸ್.
4. ಜೈಕುಮಾರ ಆರ್.
5. ಶಿವರಾಮ್
6. ರಾಕೇಶ್ ಆರ್. ವಿ.
7. ಶಿವಕುಮಾರ್
8. ನೆನಿಕೆ ಹುಸೇನ್ ಭಾಶಾ ಸಾಬ್
9. ಕುಮಾರಿ ನಂದಿನಿ ಎಸ್.
10. ರವಿಚಂದ್ರ ಎಸ್. ವಿ.
11. ರಘು .ಕೆ .ಎಂ

**ಕಾರ್ಯಾಕ್ರಮದ ಖರ್ಚುವೆಚ್ಚಗಳು**

| ಕ್ರಮ ಸಂಖ್ಯೆ | ವಿವರ | ಬೆಲೆ |
|---|---|---|
| 1 | ಬೆಳಗಿನ ತಿಂಡಿ<br>ಮದ್ಯಾಹ್ನ ಊಟ | 6750 |
| 2 | ಬ್ಯಾನರ್ ಮತ್ತು ಪ್ರಮಾಣಪತ್ರ | 810 |
| 3 | ಚಟುವಟಿಕೆ ಮತ್ತು ಸ್ಪರ್ಧೆಗಳಿಗಾಗಿ ವಸ್ತುಗಳು ಮತ್ತು ಬಹುಮಾನಗಳು | 4380 |
| 4 | ಸ್ಕೈಡ್ ವಾಲ್ ಮತ್ತು ನೆಲಹಾಸು | 450 |
| | **ಒಟ್ಟು ಮೊತ್ತ,** | **12390** |

## ಕಾರ್ಯಕ್ರಮದ ಛಾಯಾಚಿತ್ರಗಳು



ವಲಯ ಅರಣ್ಯ ಸಂರಕ್ಷಣಾಧಿಕಾರಿಯಾದ **ಶ್ರೀ ಗಣೇಶ್ ರವರು** ಮಕ್ಕಳೊಂದಿಗೆ ದೊಡ್ಡ ಬೆಕ್ಕುಗಳ ವಿಷಯದ ಮೇಲೆ ಚರ್ಚಿಸುತ್ತಿರುವುದು.

ಮತ್ತು ಶಿವರಾಮ್ ರವರು ಮಕ್ಕಳಿಗೆ ಚಟುವಟಿಕೆಯ ಮೂಲಕ ಪರಿಸರದ ಬಗ್ಗೆ ತಿಳಿಸುತ್ತಿರುವುದು.





ಭೋಜನದಲ್ಲಿ ತೊಡಗಿರುವ ಮಕ್ಕಳು ಹಾಗೂ ವಿಡಿಯೋ ಮುಖಾಂತರ ದೊಡ್ಡಬೆಕ್ಕುಗಳನ್ನು ಪರಿಚಯಿಸುತ್ತಿರುವುದು





ಮಕ್ಕಳೆ ಆನೆ , ಹುಲಿ ಚಿರತೆಗಳಾಗಿರುವ ಕ್ಷಣ ಮತ್ತು ಚಿತ್ರಕಲಾ ಸ್ಪರ್ಧೆಯಲ್ಲಿ ನಿರತ ಚಿಣ್ಣರು

